ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮನ್‌ಜೋಗ್ ಎಂಬ ಖಾಸಗಿ ಸಂಸ್ಥೆ ನಿವೇಶನ ವಿತರಣೆ ಬಗ್ಗೆ ಸಾರ್ವಜನಿಕರನ್ನು ವಂಚಿಸುತ್ತಿರುವುದು.

೫೬ (೨೮೪) ಶ್ರೀ ಎಸ್.ಎಂ. ಅಡ್ಯಂತಾಯ, (ಸುರತ್‌ಕಲ್).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮನ್‌ಜೋಗ್ ಎಂಬ ಖಾಸಗಿ ಸಂಸ್ಥೆಯೊಂದು ಬೆಂಗಳೂರು ನಗರದಲ್ಲಿ ನಿವೇಶನ ವಿತರಣೆ ಮಾಡುವುದಾಗಿ ಪತ್ರಿಕಾ ಜಾಹೀರಾತು ನೀಡಿ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮನ್‌ಜೋಗ್ ಸಂಸ್ಥೆಗೆ ನಿವೇಶನಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು ಪೂರ್ವಾನುಮತಿ ನೀಡಿದ್ದಾರೆಯೇ ?

ಇ) ಹಾಗಿಲ್ಲದಿದ್ದಲ್ಲಿ, ಸಾರ್ವಜನಿಕರನ್ನು ವಂಚಿಸುತ್ತಿರುವ ಮನ್‌ಜೋಗ್ ಸಂಸ್ಥೆಯ ಮೇಲೆ ಸರ್ಕಾರವು ಕಾನೂನು ಕ್ರಮ ಜರುಗಿಸಲಾಗಿದೆಯೇ ?

ಶ್ರೀ ಸಿ.ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

ಅ) ಹೌದು.

ಆ) ಸರ್ಕಾರದಿಂದ ಪೂರ್ವಾನುಮತಿ ನೀಡಿಲ್ಲ.

ಇ) ಮನ್‌ಜೋಗ್ ಸಂಸ್ಥೆಯ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈ ಕೆಳಕಂಡಂತೆ ಕ್ರಮ ತೆಗೆದುಕೊಂಡಿರುತ್ತಾರೆ.

೧) ಸಾರ್ವಜನಿಕರು ಮನ್‌ಜೋಗ್ ಸಂಸ್ಥೆಯ ಮುಖಾಂತರ ನಿವೇಶನ ಕೊಳ್ಳಲು ಹಣ ಪಾವತಿ ಮುಂಗಡವನ್ನು ನೀಡಬಾರದೆಂದು ವೃತ್ತಪತ್ರಿಕೆಗಳ ಮೂಲಕ ಎಚ್ಚರ ನೀಡಿದೆ.

೨) ಒಂದನೆಯ ಆಪಾದನೆಗೆ ಸಂಬಂಧಿಸಿದಂತೆ, ಇಂಡಿಯನ್ ಪೀನಲ್ ಕೋಡ್ ೪೨೦ರ ಪ್ರಕಾರ ಕ್ರಮ ತೆಗೆದುಕೊಳ್ಳುವಂತೆ ಪೋಲೀಸ್ ಇಲಾಖೆಗೆ ಸೂಚನೆ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡಬೇಕು.

ಶ್ರೀ ಎಂ. ರಘುಪತಿ:—ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯನಹಳ್ಳಿ ಸರ್ವೆ ನಂ.೧೦೨ರಲ್ಲಿ ನಿವೇಶನ ಹಂಚಿಕೆಯಲ್ಲಿ ಆಗಿರುವ ವಿಳಂಬ

೬೭ (೮೩) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ;—

ಅ) ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯಕನಹಳ್ಳಿ ಸರ್ವೆ ನಂ.೧೦೨ರಲ್ಲಿ ಹಿಂದುಳಿದ ವರ್ಗದವರಿಗೆ ನಿವೇಶನ ಹಂಚುವಲ್ಲಿ ಕಾನೂನುಬಾಹಿರ ಚಟುವಟಿಕೆಗಳೇನಾದರೂ ನಡೆದಿವೆಯೇ ಹಾಗಿದ್ದಲ್ಲಿ ಆ ಕಾನೂನು ಬಾಹಿರ ಚಟುವಟಿಕೆಗಳಾವುವು ?

ಆ) ನಿವೇಶನಗಳನ್ನು ಹಂಚುವಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ವಿಳಂಬವಾಗುತ್ತಿರಲು ಕಾರಣಗಳೇನು?

ಇ) ಗ್ರಾಮಾಂತರಾಭಿವೃದ್ಧಿ ಹಾಗೂ ವಕ್ಫ್ ಮಂತ್ರಿಗಳು ಸದರಿ ಸ್ಥಳವನ್ನು ದಿನಾಂಕ ೨೦-೧೦-೮೫ ರಂದು ಪರಿಶೀಲಿಸಿ ಊರಿನ ಬಡಜನತೆಗೆ ಉಚಿತ ನಿವೇಶನಗಳನ್ನು ನೀಡಲು ಸ್ಪಷ್ಟ ಆದೇಶವನ್ನು ಕಡಿತದಲ್ಲಿ ಬರೆದಿದ್ದರೂ ಇದುವರೆವಿಗೂ ಅದನ್ನು ಕಾರ್ಯಗತ ಮಾಡದಿರಲು ಕಾರಣಗಳೇನು ?

ಈ) ಬೆಂಗಳೂರಿನ ನಗರ ಭೂ ಪರಿಮಿತಿಯ ವಿಶೇಷ ಜಿಲ್ಲಾಧಿಕಾರಿಗಳು ಸದರಿ ಜಮೀನಿನಲ್ಲಿನ ನಿವೇಶನಗಳ ಮಾರಾಟಕ್ಕಾಗಿ ಅನುಮತಿ ನೀಡಿರುವರೆ. ಹಾಗಿದ್ದಲ್ಲಿ ಅನುಮತಿಯನ್ನು ಯಾವ ಆದಾರದ ಮೇರೆಗೆ ನೀಡಲಾಗಿದೆ?

ಉ) ಎಷ್ಟು ಸಮಯದೊಳಗೆ ಊರಿನ ಬಡ ಜನತೆಗೆ ನಿವೇಶನಗಳನ್ನು ಹಂಚಲಾಗುವುದು.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಂತರಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಮಂತ್ರಿಗಳು).—

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಸರ್ವೆ ನಂ.೧೦೨ರಲ್ಲಿಯ ಜಮೀನಿನಲ್ಲಿ ನಿವೇಶನಗಳನ್ನು ಮಾಡಿ ಹಂಚುವ ಪ್ರಶ್ನೆ ಈಗ ಸರ್ಕಾರದ ಮುಂದೆ ಇಲ್ಲ.

ಇ) ಗ್ರಾಮಾಂತರಾಭಿವೃದ್ಧಿ ಮಂತ್ರಿಗಳು ಆದೇಶ ಕೊಟ್ಟಿದ್ದು ನಿಜ. ಆದರೆ ಸದರಿ ಜಮೀನಿಗೆ ಸರ್ಕಾರ ಭೂ ಪರಿಮಿತಿ ಕಾಯ್ದೆಯನ್ವಯ ಭೂ ಮಾಲಿಕರಿಗೆ ವಿನಾಯ್ತಿ ಕೊಟ್ಟಿದೆ.

ಈ) ಹೌದು, ಜಮೀನಿನ ಸ್ವಲ್ಪ ಭಾಗವನ್ನು ನಿವೇಶನವನ್ನಾಗಿ ಮಾತಿ ಮಾರಲು ಅನುಮತಿ ನೀಡಿದ್ದಾರೆ.

ಉ) 'ಆ' ದಲ್ಲಿ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಚೋಳ ನಾಯಕನ ಹಳ್ಳಿಯ ಆನಂದಗಿರಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ

೬೮ (೮೪) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೬೫೯ ನೇ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆಗೆ ಬೆಂಗಳೂರು ಉತ್ತರ ತಾಲ್ಲೂಕಿನ ಚೋಳ ನಾಯಕನ ಹಳ್ಳಿಯ ಶ್ರೀ ಆನಂದಗಿರಿ ಬೆಟ್ಟ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುವುದೆಂದು ಉತ್ತರ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಕೊಂಡ ಕ್ರಮಗಳೇನು ?

ಇ) ಈ ದಿಸೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರು ಸ್ಥಳ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಏನಾದರೂ ಕಳುಹಿಸಿರುವರೇ ?

ಈ) ಹಾಗಿದ್ದಲ್ಲಿ, ಎಷ್ಟು ಸಮಯದೊಳಗೆ ಈ ಬೆಟ್ಟ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಬೆಂಗಳೂರು ಅಭಿವೃದ್ಧಿ ಸಚಿವರು).—

ಅ) ಹೌದು.

ಆ) ಪ್ರವಾಸೋದ್ಯಮ ಇಲಾಖೆಯು ಪೂರ್ವಭಾವಿ ಸ್ಥಳದ ಸಮೀಕ್ಷೆಯನ್ನು ನಡೆಸಿರುತ್ತದೆ.

ಇ) ಇಲ್ಲ.

ಈ) ಈ ಪ್ರದೇಶದಲ್ಲಿ ಅನೇಕ ಇಲಾಖೆಗಳು ಸೇರಿದಂತೆ, ಬಹುಮುಖವಾದ ಅಭಿವೃದ್ಧಿ ನಡೆಯಬೇಕಾಗುವುದು. ಸದ್ಯದ ಆರ್ಥಿಕ ಮುಂಗಟ್ಟಿನೀದಾಗಿ ಮುಂಬರುವ ವರ್ಷಗಳಲ್ಲಿ ಸೂಕ್ತ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಲಾಗುವುದು.